

## ಕಾಗದದ ಮೇಲಷ್ಟೇ...

ಮಾರ್ಚ್ 5, 2018ರಂದು ಸಂಸತ್ ಅಧಿವೇಶನದಲ್ಲಿ ಮಲದಗುಂಡಿಯನ್ನು ಸ್ವಚ್ಛಪಡಿಸುವವರಿಗೆ ಕಾಯಿದೆಯ ಪ್ರಕಾರ ಸುರಕ್ಷಿತಾ ಸಾಧನಗಳನ್ನು ಒದಗಿಸುವ ಕುರಿತು ಕಾರ್ಮಿಕ ಸಚಿವಾಲಯಕ್ಕೆ ಪ್ರಶ್ನೆ ಕೇಳಲಾಗಿತ್ತು. ಉತ್ತರ ನೋಡಿದರೆ ನಾವು ಮೂರ್ಛೆ ಹೋಗಬೇಕು, ಅಷ್ಟುದ್ದ ಇದೆ ಪಟ್ಟಿ! ಮಲದ ಗುಂಡಿ ಸ್ವಚ್ಛಪಡಿಸುವವರಿಗೆ ಅವರನ್ನು ನೇಮಿಸಿಕೊಂಡ ಖಾಸಗಿ ಅಥವಾ ಸರ್ಕಾರಿ ಸಂಸ್ಥೆಗಳು ಒಟ್ಟು 44 ಸುರಕ್ಷತಾ ಸಾಧನಗಳನ್ನು ಒದಗಿಸಬೇಕು ಎನ್ನುತ್ತದೆ 2013ರ 'ಸಫಾಯಿ ಕರ್ಮಚಾರಿ ಉದ್ಯೋಗದ ನಿಷೇಧ ಮತ್ತು ಅವರ ಪುರ್ನವಸತಿ ಕಾಯಿದೆ'ಯ 3ನೇ ಅಧಿನಿಯಮ. ಏರ್ ಕಂಪ್ರೆಸರ್, ಬ್ಯಾರಿಯರ್ ಕ್ರೀಮ್, ಗ್ಯಾಸ್ ಮಾನಿಟರ್, ಲೈಫ್ ಗಾರ್ಡ್ ಪ್ಯಾಡ್, ನೈಲಾನ್ ಸೇಫ್ಟಿ ಬೆಲ್ಟ್, ಸೇಫ್ಟಿ ಬಾಡಿ ಕ್ಲೋತಿಂಗ್, ಸೇಫ್ಟಿ ಗಾಗಲ್ಸ್, ಇತ್ಯಾದಿಗಳನ್ನು ಬಿಡಿ – ಕೊನೇಪಕ್ಷ ಸೇಫ್ಟಿ ಗಮ್‌ಬೂಟು, ಕೈಗವಸು, ಸೇಫ್ಟಿ ಹೆಲ್ಮೆಟ್, ಹೆಡ್ ಲ್ಯಾಂಪ್, ಏರ್ ಪ್ಯೂರಿಫೈಯರ್ ಗ್ಯಾಸ್ ಮಾಸ್ಕ್, ಹೀಗೆ ಕನಿಷ್ಠಮಟ್ಟದ ಸುರಕ್ಷತಾ ಸಾಧನಗಳನ್ನಾದರೂ ಕೊಡುತ್ತಿದ್ದೇವೆಯೇ?

ದೇಶದ ಯಾವುದಾದರೂ ನಗರಸಭೆ, ಜಲಮಂಡಳಿ ಇಂತಹ ಸಾಧನಗಳನ್ನು ಕೆಲಸ ಮಾಡುವವರಿಗೆ ಕೊಟ್ಟ ದಾಖಲೆ ಇದೆಯೇ?

ಈಗ 2018ಕ್ಕೆ ಬನ್ನಿ. ಈ ವರ್ಷ ಆರಂಭವಾಗಿದ್ದೇ ಒಳಚರಂಡಿ ಸ್ವಚ್ಛಪಡಿಸುವ ಕೆಲಸಗಾರರ ಮರಣದಿಂದ. ಮೊದಲ ಏಳು ದಿನಗಳಲ್ಲಿ ಏಳು ಜನ ಸತ್ತಿದ್ದಾರೆ. ಜ. 1ರಂದು ಮುಂಬಯಿಯಲ್ಲಿ ನೆಲದಿಂದ 10 ಅಡಿ ಆಳದಲ್ಲಿ ಒಳಚರಂಡಿ ಕೊರೆಯಲು ಐವರು ಕೆಳಗೆ ಇಳಿದಿದ್ದರು. ಅವರನ್ನು ಮೇಲೆ ಎತ್ತುವಾಗ ಕ್ರೇನಿನ ಕೇಬಲ್ ಕತ್ತರಿಸಿ ಬಿದ್ದು ನಾಲ್ವರು ಸತ್ತಿದ್ದರು. ಇನ್ನೊಬ್ಬ ಕಾಲು, ಸೊಂಟ ಮುರಿದುಕೊಂಡು ಆಸ್ಪತ್ರೆ ಸೇರಿದ. ಜ. 7ರಂದು ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟಿನ ಐಷಾರಾಮಿ ಅಪಾರ್ಟ್‌ಮೆಂಟ್ ಸಮುಚ್ಛಯದಲ್ಲಿ ಸೆಪ್ಟಿಕ್ ಟ್ಯಾಂಕ್ ಸ್ವಚ್ಛಪಡಿಸುವಾಗ ಮೂವರು ಸತ್ತಿದ್ದರು.

ಇತ್ತೀಚೆಗೆ ಆಗಸ್ಟ್ ತಿಂಗಳಿನಲ್ಲಿ ಶಿವಮೊಗ್ಗದಲ್ಲಿ ಕಟ್ಟಿಕೊಂಡಿದ್ದ ಒಳಚರಂಡಿಯ 15 ಅಡಿ ಆಳದ ಗುಂಡಿಯನ್ನು ಸ್ವಚ್ಛಪಡಿಸಲು ಮೊದಲು ಒಬ್ಬರನ್ನು ಇಳಿಸಿದರು. 'ಅವನಿಗೇನಾಯಿತು ನೋಡು' ಎಂದು ಇನ್ನೊಬ್ಬ ಹುಡುಗನನ್ನು ಇಳಿಸಿದರು. ಇಬ್ಬರನ್ನು ಮತ್ತೆ ಮೇಲೆತ್ತಿದ್ದು ಹೆಣವಾಗಿ. ಮೊದಲು ಗುಂಡಿಗೆ ಇಳಿದವನಿಗೆ 37 ವರ್ಷ, ಇನ್ನೊಬ್ಬ 17ರ ಹರೆಯದ ಹುಡುಗ.

ಮೊನ್ನೆ ಮೊನ್ನೆ ಇದೇ ಸೆ. 9ರಂದು ರಾಜಧಾನಿ ದೆಹಲಿಯ ಮೋತಿನಗರದ ಡಿಎಲ್‌ಎಫ್ ಕ್ಯಾಪಿಟಲ್ ಗ್ರೀನ್ ಅಪಾರ್ಟ್‌ಮೆಂಟ್ ಸಮುಚ್ಛಯದಲ್ಲಿ 30 ಅಡಿ ಆಳದ ಸೆಪ್ಟಿಕ್ ಟ್ಯಾಂಕ್ ಸ್ವಚ್ಛಪಡಿಸಲು ಮೊದಲು ಮೂವರು ಕೆಲಸಗಾರರು ಇಳಿದರು. ಅವರಿಂದ ಏನೂ ಪ್ರತಿಕ್ರಿಯೆ ಬಾರದ್ದನ್ನು ಕಂಡ ಗುತ್ತಿಗೆದಾರ, ಹೌಸ್‌ಕೀಪಿಂಗ್ ಮಾಡುತ್ತಿದ್ದ ಇನ್ನಿಬ್ಬರನ್ನು ಒತ್ತಾಯಪಡಿಸಿ ಕೆಳಗಿಳಿದು ನೋಡುವಂತೆ ಕಳಿಸಿದ. ಐದೂ ಜನರಿಗೆ ವಿಷಾನಿಲದಿಂದ ಉಸಿರುಗಟ್ಟಿತು. ಇಬ್ಬರು ಸ್ಥಳದಲ್ಲಿ ಸತ್ತಿದ್ದರು, ಮೂವರು ಆಸ್ಪತ್ರೆ ಸೇರುವಾಗ ಮತ್ತು ಸೇರಿದ ನಂತರ ಸತ್ತರು. ಇವರೆಲ್ಲ 22ರಿಂದ 30 ವರ್ಷದ ಒಳಗಿನವರು.

ಈ ಯಾರಿಗೂ ಕನಿಷ್ಠ ಸುರಕ್ಷತಾ ಸಾಧನಗಳೂ ಇರಲಿಲ್ಲ. ಮಲದ ಗುಂಡಿಗೆ ಇಳಿಯುವ ದಲಿತರ ಜೀವಕ್ಕೆ ಎಲ್ಲಿದೆ ಬೆಲೆ? ಇವು ವರದಿಯಾದ ಪ್ರಕರಣಗಳಲ್ಲಿ ಕೆಲವು ಮಾತ್ರ. ವರದಿಯಾಗದೇ ಮುಚ್ಚಿಹೋಗುವ ಪ್ರಕರಣಗಳು ಇನ್ನಷ್ಟು.

## ಅಮಾನುಷ ಜಾತಿಪದ್ಧತಿ

ಕರ್ನಾಟಕ ಮಾತ್ರವಲ್ಲ, ಇಡೀ ದೇಶದಲ್ಲಿ ಹೀಗೆ ಮೇಲ್ಜಾತಿಯವರ ಮಲ ಬಾಚುವ, ಚರಂಡಿ ಗುಂಡಿಗಳನ್ನು ಸ್ವಚ್ಛಪಡಿಸುವ ಕೆಲಸವನ್ನು ಒಂದೇ ಒಂದು ದಲಿತ ಸಮುದಾಯಕ್ಕೆ ವಹಿಸಿಬಿಟ್ಟಿದ್ದೇವೆ. ಅಮಾನುಷ ಜಾತಿಪದ್ಧತಿಯ ಅತ್ಯಂತ ಕೆಳಮೆಟ್ಟಿಲಿನಲ್ಲಿ ಅವರನ್ನು ನಿಲ್ಲಿಸಿದ್ದೇವೆ. ಆ ಜಾತಿಯಲ್ಲಿ ಹುಟ್ಟಿದವರು ಅದೇ ಕೆಲಸ ಮಾಡಬೇಕು ಎಂದು ನಂಬಿಸಿದ್ದೇವೆ. ತೋಟಿ ಅಥವಾ ಭಂಗಿಗಳನ್ನು ಜಾತಿ ವ್ಯವಸ್ಥೆಯಲ್ಲಿ ಕ್ರೂರವಾಗಿ ತುಳಿಯುತ್ತಲೇ ಬರಲಾಗಿದೆ. ಅವರು ಹುಟ್ಟಿರುವುದೇ ಕಟ್ಟಿಕೊಂಡ ಮಲದ ಗುಂಡಿಗಳನ್ನು, ಚರಂಡಿ ಗುಂಡಿಗಳನ್ನು ಸ್ವಚ್ಛಪಡಿಸಲು ಎಂಬಂತೆ ಅವರ ಬೆನ್ನಿನ ಮೇಲೆ ನಮ್ಮ ಮಲದ ಬುಟ್ಟಿಯನ್ನು ಹೊರೆಸಿದ್ದೇವೆ. ಊರಂಚಿನ ಗುಡಿಸಲು ಬಿಟ್ಟರೆ ಇವರಿಗೆ ಬೇರೆ ಆಸ್ತಿಯಿಲ್ಲ. ಬೇರೆ ಕೆಲಸಗಳಿಗೆ